'ನಿಮ್ಮಂತೆ ನಾವಾಗುವ' ಅನಿವಾರ್ಯತೆ ಖಂಡಿತಾ ಇದೆ. ಉದಾಹರಣೆಗೆ, ಕೆ.ವಿ. ತಿರುಮಲೇಶ್ ಕೂಡ ಮಾಸ್ ಕವಿಯಲ್ಲ. ಆದರೆ ನವ್ಯದ ಅಭಿವ್ಯಕ್ತಿಯ ಹದ್ದು ಮೀರದೆಯೂ ಅವರ ಹೃದಯದಿಂದ 'ನೀನು ನಾನಾದ' ಕವಿತೆ ತಿರುಮಲೇಶರ 'ಪೆಂಟಯ್ಯನ ಅಂಗಿ'. ಇಲ್ಲಿ ಕಥನ, ಬಿಗಿಯಾದ ಅಭಿವ್ಯಕ್ತಿ, ಅಡಕಗೊಂಡ ಭಾವಸ್ಫೋಟ ಎಲ್ಲವೂ ಇದೆ. ಅದರೊಳಗಿನ ವಿವರಗಳಾದ ಇದ್ದಿಲು ಇತ್ಯಾದಿಗಳು ಮಾಯವಾದ ಈ ಕಾಲದಲ್ಲೂ ಈಗಲೂ ವಿದ್ಯಾರ್ಥಿಗಳು ಅದನ್ನು ಕೇಳಿ ನಿಟ್ಟುಸಿರಿಡುತ್ತಾರೆ. ಕನೆಕ್ಟ್ ಆಗ್ತಾರೆ. ಅದನ್ನು ಅಲ್ಲಗಳೆಯುವುದಿಲ್ಲ. ಇದು ಅಷ್ಟು ಸುಲಭದ ಸಂಗತಿಯಲ್ಲ. ಕನ್ನಡದಲ್ಲಿ ಕವಿತೆಗಳು ನಾದ, ನಾಟ್ಯ, ಕಥನಗಳಿಗೆ ಹತ್ತಿರವಾಗಿದ್ದಾಗಲೇ ಹೆಚ್ಚು ಸಮೂಹ ವನ್ನು ತಲುಪುತ್ತದೆ ಎಂದೆನಿಸುತ್ತದೆ. ಮಮತಾ ಅವರಿಗೆ ಲಯದ ಮೇಲೆ ಬಹಳ ಹಿಡಿತ ಇದೆ. ಆ ಲಯವನ್ನು ಅವರು ಇನ್ನಷ್ಟು ಅಂಗಳದಲ್ಲಿ ಆಡಲು ಬಿಡಬೇಕು.

ಮೊದಲ ಸಂಕಲನದಿಂದ ಇಂದಿನ ತನಕ ಕಾಲದ ಪ್ರವಾಹದಲ್ಲಿ, ಚಿಂತನೆಗಳ ಅಲೆಯುಬ್ಬರದಲ್ಲಿ ಕಣ್ಣ ಮುಂದಿನ ಭರವಸೆಗಳು ಬೆಳೆಯುತ್ತಿದ್ದಾಗಲೇ, ಯಾರೋ ಅಪಹರಿಸಿದ ದಿಗ್ಭ್ರಾಂತಿಯಲ್ಲಿಯೂ ಕೂಡಾ ಮಮತಾ ಕವಿತೆ ತನ್ನದೇ ಸ್ವಂತಿಕೆಯ ಚಹರೆಯನ್ನು ಉಳಿಸಿಕೊಂಡು ಮುನ್ನಡೆಯುತ್ತಿದೆ. ಕನ್ನಡದಲ್ಲಿ ಕವಿತೆಯನ್ನೇ ಮುಖ್ಯ ಅಭಿವ್ಯಕ್ತಿಯಾಗಿ ನಿರಂತರ ಬರೆದ ಮಹಿಳೆಯರು ಬೆರಳೆಣಿಕೆಯಷ್ಟು ಜನ. ಇವರೆಲ್ಲರೂ ಸಮಕಾಲೀನತೆಗೆ ಸ್ಪಂದಿಸಿದವರೇ. ಇವರೆಲ್ಲರ ಶೈಲಿಯೂ ಭಿನ್ನವೇ. ನಾನಂತೂ ಯಾರದೇ ಶೈಲಿಯನ್ನು ಮಡಿವಂತಿಕೆಯಿಂದ ನೋಡುವುದಿಲ್ಲ. ಸತ್ವ ಮತ್ತು ಸಾಧ್ಯತೆಯಿಂದ ಮಾತ್ರ ನೋಡುತ್ತೇನೆ. ಕವಿತೆಯೆಂದರೆ 'ಹೀಗೇ ಇರಬೇಕು' ಎನ್ನುವುದೇ ಪೇಟ್ರಿಯಾರ್ಕಲ್ ಮನಸ್ಥಿತಿ ಅಂತ ನಾನು ಭಾವಿಸುತ್ತೇನೆ. ಯಾರು ಯಾರಿಗಾದರೂ ಯಾಕೆ ಹುಕುಂ ಕೊಡಬೇಕು? 1992ರಲ್ಲಿ ತಮ್ಮ ಮೊದಲ ಸಂಕಲನ ಪ್ರಕಟಿಸಿದ ಮಮತಾ ಅವರ ಈವರೆಗಿನ ಸಂಕಲನವಾದ 'ಪದಸಂಚಾರ'ದಲ್ಲಿ ಮೊದಲಿನ ನಾಲ್ಕು ಮತ್ತು ಈಚೆಗೆ ಬರೆದ ಕವಿತೆಗಳೂ ಸೇರಿವೆ. ಮಮತಾ ಕನ್ನಡದ ಇತರೆಲ್ಲಾ ಕವಿಗಳಿಗಿಂತ ಬೇರೆಯದೇ ರೀತಿಯಲ್ಲಿ ಬರೆಯುತ್ತಾರೆ. ಅವರ ಪ್ರತಿ ಕವಿತೆಯಲ್ಲಿ ಒಂದೆರಡು ಸಾಲಾದರೂ ಅವರದೇ ಕವಿತೆಯೊಂದರಲ್ಲಿ ಹೇಳಿದಂತೆ "ಒಂದು ಎಲೆ ಹಾಗೆ ಮೆಲ್ಲಗೆ/ ಮರದಿಂದ ಜಾರಿ ತೇಲುತ್ತ/ ... ... ನೀರ ಮೇಲಿನ ದೋಣಿಯಾಯ್ತು/ ಬಣ್ಣ ಬಣ್ಣದ ಮೀನ ಜೊತೆ ಅಲೆಯ ಮೇಲೆ ... ನೀರ ಜೊತೆಯಲ್ಲಿ ಮರೆಯಾಯ್ತು/ ನೀರಿಗೂ ಗೊತ್ತಿಲ್ಲ, ಮೀನಿಗೂ ಗೊತ್ತಿಲ್ಲ/ ಗಾಳಿಗೂ ಗೊತ್ತಿಲ್ಲ, ಮರಕ್ಕೂ ಗೊತ್ತಿಲ್ಲ ಈ ಕಣ್ಣುಮುಚ್ಚಾಲೆಯಾಟ" ಎಂಬಂತೆ ಅಡಕ ಗೊಳ್ಳುತ್ತವೆ. ಕೆಲವು ಸಾಲುಗಳು:

**ನಾನು ನನ್ನಮ್ಮನ ಹಾಗೆ**
**ನನ್ನ ಕಣ್ಣೊಳಗೆ ಅವಳ ಕಣ್ಣೀರು (ಅಮ್ಮನಿಗೆ)**
**ಆಗಾಗ ಕೇಳುತ್ತಿದ್ದ ಅಗಳಿ ತಟ್ಟಿದ ಸದ್ದು**
**ಈಗ ಎಲ್ಲೆಲ್ಲೂ ಕೇಳುತ್ತಿದೆ! (ಅಗಳಿ ತಟ್ಟಿದ ಸದ್ದು)**
**ಏನಾಯ್ತು? ಹೇಗಾಯ್ತು? ಯಾಕಾಯ್ತು? ಕೇಳದಿರಿ**
**ಉಸಿರು ನಿಲ್ಲುವ ಮುನ್ನ, ಮಾತಾಡಿರಿ (ಗೌರಿಗೆ)**
**ಈ ಬದುಕ ಪ್ರೀತಿಸುವುದೇ ಹೀಗೆ**
**ದಿನಕ್ಕೊಂದು ಹೆಜ್ಜೆ ಹಾಕುತ್ತ (ಮನೆ)**
**ನಾವು ಮಲಗುವುದು ಹಾಸಿಗೆಯ ಮೇಲಲ್ಲ**
**ಕನಸುಗಳ ಮೇಲೆ**
**ನಿದ್ದೆಯಿಂದೇಳುವುದು ಕನಸ ಕೊಡವಿಕೊಂಡು**
**(ಕನಸುಗಳು)**
**ಕತ್ತಲ ಒಡಲಲ್ಲಿ/ ಎಲ್ಲಕ್ಕೂ ಒಂದೇ ಬಣ್ಣ (ಶಿಮ್ಲಾದಲ್ಲಿ)**
**ಹೊದಿಕೆ ಮೇಲಿನ ಹೂಗಳು/ ನನ್ನೊಳಗೆ ಅರಳುತ್ತವೆ**
**(ಹೊದಿಕೆ)**
**ತಾರೆ ಸಹಿತ ಧುಮುಕಿ/ ನದಿ ಸೇರಿದ್ದಾನೆ ಚಂದ್ರ**
**(ಹೊಳೆ ಬಾಗಿಲು)**
**ಹೂವಿನಂತೆ ಮುಡಿದು ಮರೆಯಬೇಕು/**
**ಮುದುಡಿದಾಗ ಎತ್ತಿ ಅತ್ತ ಬಿಸಾಡಬೇಕು**
**(ನಲ್ಲರ ಪ್ರೀತಿ)**

ಇಂತಹ ಶಕ್ತಿ, ಸಾಮರ್ಥ್ಯದ ಮಮತಾ ಇನ್ನಷ್ಟು ಪ್ರಯೋಗಗಳನ್ನು ಮಾಡಬಲ್ಲರು. ಯುವಕವಿಗಳ ಜೊತೆಗಾರಿಕೆಯಲ್ಲಿ ಅವರ ಕಾವ್ಯಸಂಜೆ ಪ್ರಯೋಗವು ಬೀದಿಯಲ್ಲಿ, ರೈಲಿನಲ್ಲಿ, ಸಂತೆಯಲ್ಲಿ ಕವಿತೆಗಳನ್ನು ಓದುವುದನ್ನು ಕೇಳಿದ್ದೇನೆ. ಮತ್ತು ಅವರ ಕವಿತೆಯೊಳಗೆ ಅವೆಲ್ಲವೂ ಕವಿತೆಗಳಾಗುವ ಪ್ರಕ್ರಿಯೆಯು ಚಲಾವಣೆಯಲ್ಲಿದೆ. ಅದು ಪಡೆಯುವ ಕಾವ್ಯಪಥದೆಡೆಗೆ ನಾನೂ ಕುತೂಹಲಿಯಾಗಿದ್ದೇನೆ.

●